

ನೋಡುತ್ತಿದ್ದಳು. ಮತ್ತೆ, ಮತ್ತೆ ಒಂದೆರಡು ಸಲ ಕೇಳಿದ ಮೇಲೆ ಮೆಲ್ಲನೆ, 'ಊರಿನಿಂದ ಕಾಲ್ ಬಂತು, ತಂಗಿಯ ಮದುವೆ ಕಳೆದ ವಾರವೇ ನಿಶ್ಚಯವಾಯಿತಂತೆ. ನನಗೆ ಹೇಳಲೇ ಇಲ್ಲ, ವರ್ಷ ಮೂವತ್ತಾಯಿತು. ನನ್ನ ಮದುವೆಯ ಬಗ್ಗೆ ಯಾರಿಗೂ ಆಲೋಚನೆ ಇಲ್ಲ. ದುಡ್ಡು ಎಷ್ಟು ಕಳುಹಿಸುತ್ತಿ ಅಂತ ಮಾತ್ರ ಕೇಳುತ್ತಿದ್ದಾರೆ'.

'ಅಯ್ಯೋ ಇದು ಹೊಸತಲ್ಲವಲ್ಲ, ಕಣ್ಣೊರೆಸಿಕೊ ಮೊದ್ಲು. ನನ್ನದು ಮತ್ತೊಂದು ಕಥೆ ಇದೆ ಮಾರಾಯ್ತಿ, ನಿನ್ನೆ ರಾತ್ರಿ ಕುಸುಮಾಳ ಫೋನ್ ಬಂತು, ತಾನು ಮೋಸ ಹೋದ ಬಗ್ಗೆ ಕೊರೆದಳು. ಪುನಃ ಎಲ್ಲಾದರೂ ಕೆಲಸಕ್ಕೆ ಸೇರುತ್ತಾಳಂತೆ, ನನಗೆ ಮದ್ವೆ ಆಗಿದೆಯಾ ಅಂತ ವಿಚಾರಿಸುತ್ತಿದ್ದಳು... ಪಾಪ ಅನ್ನಿಸಿತು'. ಅವಳು ಮಾತಾಡಲಿಲ್ಲ.

ಎಲೆ ಅಡಿಕೆ ಜಗಿಯುತ್ತಾ ಬಂದ ಕಂಟ್ರ್ಯಾಕ್ಟರ್ ಶಿವಪ್ಪ, 'ಪರಮೇಶಿ... ನಿನ್ನನ್ನೇ ಹುಡುಕುತ್ತಿದ್ದೇನಪ್ಪ, ದುಡ್ಡಿನ ಆಸೆ ಜಾಸ್ತಿಯಾಯಿತು ಎಲ್ಲರಿಗೂ. ಸಾಯಂಕಾಲ ಮತ್ತೊಂದು ರಿಸೆಪ್ಶನ್ ಇದೆಯಂತೆ ಇಲ್ಲೇ. ಪಾರ್ಟಿಗೆ 3 ಗಂಟೆಗೇ ರೆಸಾರ್ಟನ್ನು ಬಿಟ್ಟುಕೊಡಬೇಕು ಎಂದ್ರು. 2 ಗಂಟೆಯಾಗುತ್ತಿದ್ದಂತೆ ಮದುವೆಯ ಮಂಟಪವನ್ನು ಕಳಚಲು ನೀನು ಶುರು ಮಾಡಪ್ಪ. ಹಾಂ ನಿನ್ನೆ ರಾತ್ರಿಯ ಪ್ಲೇಟು, ಲೋಟಗಳು ಇನ್ನೂ ಕಸದ ಡಬ್ಬದಲ್ಲೇ ಬಿದ್ದಿವೆ. ಮುನಿಸಿಪಾಲಿಟಿಯವರು ಎತ್ತಿಲ್ಲ. ವಾಸನೆ ಬರ್ತಿದೆ. ಸ್ವಲ್ಪ ರೂಂ ಫ್ರಶನರ್ ಹೊಡೆದು ಬಿಡಪ್ಪ'... ಸುಜಾತಳತ್ತ ತಿರುಗಿ, 'ಉಂಡ ಎಲೆ ಎತ್ತುವವರು ಬಂದಿಲ್ಲ, ಸ್ವಲ್ಪ ಎತ್ತುತ್ತಿಯೇನಮ್ಮ?'

ಆಗಲೆಂಬಂತೆ ತಲೆಯಲ್ಲಾಡಿಸಿದವಳು, ಸೀರೆಯ ನೆರಿಗೆಯನ್ನು ಎತ್ತಿ ಕಟ್ಟಿ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು, ಉಂಡ ಎಲೆ ಹಾಸಿದ ಪೇಪರ್ ಮಡಚತೊಡಗಿದಳು. ಎಲೆಯೊಂದರಲ್ಲಿದ್ದ ಸಾರನ್ನ ಹಾರಿ ಅವಳುಟ್ಟಿದ್ದ ಸೀರೆಗೆ ಅಂಟಿಕೊಂಡಿತು.